# ಬದುಕಲು ಬಿಡಿ, ನೀವೂ ಬದುಕಿ

ಪ್ರಕೃತಿ ಮಾತೆ ತುಂಬ ವಿಶಾಲ ಹೃದಯದವಳು. ತನ್ನ ಮಕ್ಕಳನ್ನು ತರತಮ ಭಾವದಿಂದ ಎಂದೂ ಕಾಣಲಾರಳು. ಎಲ್ಲರಿಗೂ ಬದುಕಲು ಅವಕಾಶ ಕಲ್ಪಿಸಿದ್ದಾಳೆ. ಅವಳ ಮಕ್ಕಳು ತಂತಮ್ಮ ಬದುಕಿನ ಕಾಲಾವಧಿಯಲ್ಲಿ ತಮ್ಮ ಅವಶ್ಯಕತೆಗೆಷ್ಟು ಬೇಕೋ ಅಷ್ಟನ್ನು ಮಾತ್ರ ಬಳಸಿಕೊಂಡು ಜೀವಿಸಿದರೆ ಅವರಲ್ಲಿ ಪರಸ್ಪರ ವೈಷಮ್ಯವಾಗಲೀ ದ್ವೇಷವಾಗಲೀ ಉಂಟಾಗುವುದಿಲ್ಲ. ಪ್ರಕೃತಿಯಲ್ಲಿ ಎಲ್ಲ ಜೀವಿಗಳಿಗೂ ಸಾಕಾಗುವಷ್ಟು ಸಂಪನ್ಮೂಲಗಳು ಇರುತ್ತವೆ. ಬಹುಪಾಲು ಜೀವಿಗಳು ತಮ್ಮ ಜೀವಿತಕ್ಕೆಷ್ಟು ಬೇಕೋ ಅಷ್ಟನ್ನು ಮಾತ್ರ ಬಳಸಿಕೊಂಡು ಬದುಕುತ್ತವೆ. ದುಷ್ಟ ಮೃಗಗಳೆಂದು ಮಾನವ ಕರೆದು ಗುರುತಿಸುವ ಯಾವ ಪ್ರಾಣಿಯೂ ಹೊಟ್ಟೆ ತುಂಬಿದ ನಂತರ ತನ್ನ ಅಕ್ಕಪಕ್ಕದಲ್ಲಿಯೇ ಸುಳಿದಾಡುವ ತನ್ನ ಜೀವಂತ ಆಹಾರದ ಕಡೆ ಗಮನವನ್ನು ನೀಡುವುದಿಲ್ಲ. ಸಸ್ಯಗಳೂ ಅಷ್ಟೆ. ಸಹಬಾಳ್ವೆ ಅವುಗಳ ಪ್ರಮುಖ ಲಕ್ಷಣ. ಅದನ್ನು ಗಮನಿಸಬೇಕಾದರೆ– ನಾವು ನಮ್ಮ ಸ್ವಾಭಾವಿಕ ಅರಣ್ಯಗಳನ್ನು ನೋಡಬೇಕು. ಒಂದೇ ಜಾತಿಯ ಗಿಡಮರ ಬಳ್ಳಿಗಳ ವಾಸ್ತವ್ಯದಲ್ಲಿ ಒಂದು ಬಗೆಯ ಸಮಾನವಾದ ಹಂಚಿಕೆಯ ವ್ಯವಸ್ಥೆಯಿರುತ್ತದೆ. ತನ್ನ ಅಕ್ಕಪಕ್ಕ ಅನ್ಯಜಾತಿಯ ಸಸ್ಯವರ್ಗವನ್ನು ಬೆಳೆಯಬಿಟ್ಟು, ಪರಸ್ಪರ ಸ್ಪರ್ಶಸುಖವನ್ನು ಅನುಭವಿಸುತ್ತಾ ಬಾಳ್ವೆ ಮಾಡುವುದನ್ನು ಕಲಿತಿರುತ್ತವೆ. ಒಂದೇ ಮಣ್ಣಿನಲ್ಲಿರುವ ಶಕ್ತಿಯನ್ನು ತಮಗೇನು ಬೇಕೋ ಅದನ್ನು ಮಾತ್ರ ಬಳಸಿಕೊಂಡು– ಅನ್ಯದರ ಅಹಾರಕ್ಕೆ ಆಸೆಪಡದೆ ಜೀವಿಸುತ್ತವೆ. ತಾನು ದಪ್ಪ ಗಾತ್ರ ಉದ್ದನೆಯ ಮರವೆಂದು ದೊಡ್ಡದು ಬೀಗದು; ತಾನು ನೆಲವನ್ನೇ ಅಪ್ಪಿ ಬದುಕುತ್ತಿರುವ ಅಲ್ಪನೆಂದು ಸಣ್ಣದು ಕೀಳರಿಮೆಯಿಂದ ಕೊರಗದು. ಅವುಗಳಿಗೆ ಅವುಗಳದೇ ಆದ ಅಸ್ತಿತ್ವ ಜವಾಬ್ದಾರಿ ಮತ್ತು ಗೌರವಗಳು ಇರುತ್ತವೆ. ಇತರೆ ಸಸ್ಯ ವರ್ಗಗಳು ಅದನ್ನು ಮಾನ್ಯ ಮಾಡುತ್ತವೆ.

ಇಡೀ ಪ್ರಕೃತಿಯ ಮಕ್ಕಳಲ್ಲಿ ಮಾನವನೊಬ್ಬನೇ ಅತ್ಯಂತ ದುರಾಸೆಯ ಕಣಜವಿರಬೇಕು. ಅದು ಆಹಾರಕ್ಕಷ್ಟೇ ಸೀಮಿತವಲ್ಲ. ಆಹಾರಕ್ಕೆಂದು ಆಕ್ರಮಶೀಲ ಪ್ರವೃತ್ತಿಯನ್ನು ತೋರುತ್ತಿದ್ದಾನೆಂದರೆ, ಅದು ಬದುಕುವ–ಅಸ್ತಿತ್ವದ ಲಕ್ಷಣವೆಂದು ಭಾವಿಸಬಹುದು. ಈ ಲಕ್ಷಣ ಇತರ ಜೀವಿಗಳಲ್ಲೂ ಕಂಡುಬರುತ್ತದೆ. ಆದಿ ಮಾನವನಲ್ಲೂ ಕೂಡ ಈ ಗುಣವಿತ್ತು, ಅದು ನಾಳೆಗೆಂದು ವಿಸ್ತರಿಸುತ್ತಿರಲಿಲ್ಲ. ಇಂದಿನ ಅವಶ್ಯಕತೆಯನ್ನು ತೀರಿಸಿಕೊಳ್ಳುವ ಪ್ರವೃತ್ತಿಯ ಮಟ್ಟದ್ದಾಗಿತ್ತು, ಅದರಾಚೆಗಿಲ್ಲ! ಆದರೆ ಅವನು ಆದಿಮ ಸ್ಥಿತಿಯನ್ನು ದಾಟಿ ನಾಗರಿಕನಾಗುತ್ತಾ ಆಗುತ್ತಾ ಅವನ ಆಸೆಯ ಪರಿಕಲ್ಪನೆಗಳು ವಿಸ್ತರಿಸತೊಡಗಿದವು. ತಾನು ತನ್ನವರು ತನ್ನ ಊರು ರಾಜ್ಯ ಜಾತಿ–ಧರ್ಮಗಳೆಂಬ ಕವಲುಗಳಲ್ಲಿ ಗರಿಗೆದರಿಕೊಂಡು ಪ್ರಕೃತಿ ಮಾತೆಯ ಇತರ ಮಕ್ಕಳ ಮೇಲೆ ಅತಿಕ್ರಮಿಸುವುದರ ಜೊತೆಗೆ, ತನ್ನದೇ ಸಂಕುಲದ ಇತರೆ ಗುಂಪುಗಳ ಮೇಲೆ ಅಧಿಪತ್ಯ ಸ್ಥಾಪಿಸ ಹೊರಟಿದ್ದು ಮಾತ್ರ ಸಮಾನತೆಗೆ ಬಿದ್ದ ದೊಡ್ಡ ಪೆಟ್ಟೆಂದು ಅರಿಯಬೇಕು. 'ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು' ಎಂಬ ಆದರ್ಶ ಸಹಜ ನ್ಯಾಯವನ್ನು ನುಂಗಿ ಹಾಕುವ ಪರಿ ಇದು. ರಾಜ್ಯ ಸ್ಥಾಪನೆಯ ಹೆಸರಲ್ಲಿ, ಅದರ ವಿಸ್ತರಣೆಯ ಹೆಸರಲ್ಲಿ ಮತ್ತು ಮತ ಧರ್ಮಗಳ ಪ್ರಚಾರ ಹಾಗೂ ವಿಸ್ತರಣೆಯ ಹೆಸರಲ್ಲಿ ನಡೆಸಿರುವ ಆಕ್ರಮಣಗಳು ಕ್ರೌರ್ಯದ ಎಲ್ಲೆಯನ್ನು ಮೀರಿವೆ. ಮಾನವ ಮಾನವನನ್ನು ಮೇಲು ಕೀಳು– ಕರಿಯ ಬಿಳಿಯ– ಜಾತಿ ವಿಜಾತಿ– ಧರ್ಮೀಯ ಅನ್ಯಧರ್ಮೀಯ– ಸ್ಪೃಶ್ಯ ಅಸ್ಪೃಶ್ಯ– ಎಂಬೆಲ್ಲಾ ಮಾನದಂಡಗಳಿಂದ ತೊತ್ತಳ ತುಳಿದಿರುವುದನ್ನು ಕಾಣಬಹುದು. ಈ ಕ್ರೌರ್ಯವನ್ನು ನಮ್ಮ ಚರಿತ್ರೆ ಸ್ವಾಭಿಮಾನದಿಂದ ವೈಭವೀಕರಣ ಮಾಡಿರುವುದನ್ನು ಭಿನ್ನ ನೆಲೆಯಿಂದ ವಿಮರ್ಶಿಸಬೇಕು. ಈ ಕೃತ್ಯಗಳನ್ನು 'ದಿಗ್ವಿಜಯ'ವೆಂತಲೂ ಸಾಮ್ರಾಜ್ಯ ಸ್ಥಾಪನೆಯೆಂತಲೂ ಧಾರ್ಮಿಕ ದಿಗ್ವಿಜಯವೆಂತಲೂ ಅಭಿಮಾನದಿಂದ ಹೇಳಿಕೊಳ್ಳುವುದನ್ನು ಮತ್ತು ಬರೆದುಕೊಳ್ಳುವುದನ್ನು ಮತ್ತೊಮ್ಮೆ ಮಾನವೀಯ ನೆಲೆಯಿಂದ ನೋಡುವುದನ್ನು ಕಲಿಯಬೇಕು.

ಇಂದು ಹಂಚಿಕೊಂಡು ಬದುಕುವುದು ಆದರ್ಶವಾಗಬೇಕು. ಹಂಚಿಕೆಯೆಂದರೆ ಉಳ್ಳವರು ಇಲ್ಲದವರಿಗೆ ನೀಡುವ ಭಿಕ್ಷೆಯೂ ಅಲ್ಲ, ದಾನವೂ ಅಲ್ಲ, ಅದು ಶ್ರಮದ ಉದ್ಯೋಗದ ಹಂಚಿಕೆ. ಸಮಾನ ವೇತನದ ಹಂಚಿಕೆ. ವಸತಿ ವಸ್ತ್ರಗಳ ಹಂಚಿಕೆ. ಪ್ರೀತಿ ತುಂಬಿದ ಮಾತು– ನೋಟ ಮತ್ತು ಸ್ಪರ್ಶದ ಹಂಚಿಕೆ. ಜಗತ್ತಿನ ಬೆರಳೆಣಿಕೆಯಷ್ಟು ಶ್ರೀಮಂತರು ಸಮಾನವಾಗಿ ಹಂಚಿಕೆಯಾಗುತ್ತಿದ್ದ ಸಂಪತ್ತನ್ನು ತಮ್ಮಲ್ಲಿ ದುರಾಸೆಯಿಂದ ಕ್ರೋಢೀಕರಿಸಿ ಇಟ್ಟುಕೊಂಡಿದ್ದಾರೆಂದು ನಾವು ಅರಿಯುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ನಾವು ಮಾತ್ರ ಎತ್ತರದವರೆಂದೂ ಇತರರು ಗುಲಾಮರೆಂದೂ ಬೀಗುವ ಮನಸ್ಥಿತಿ ಮಾನವ ಸಮುದಾಯದಲ್ಲಿ ಪ್ರೀತಿ ಸಾಮರಸ್ಯವನ್ನುಂಟು ಮಾಡುವುದಿಲ್ಲ. ಅದರ ಬದಲು ಪರಸ್ಪರ ಅಪನಂಬಿಕೆ ದ್ವೇಷ ಪರಿಗ್ರಹ ಭಾವಗಳನ್ನು ಉದ್ದೀಪಿಸುತ್ತದೆ. ಶ್ರೀಮಂತರಲ್ಲಿ ಭೋಗಲಾಲಸೆಯನ್ನೂ ಅನಾರೋಗ್ಯ ಸ್ಪರ್ಧೆಯನ್ನೂ ಉಂಟುಮಾಡಿ ತಾಮಸ ಪ್ರವೃತ್ತಿಯನ್ನುಂಟು ಮಾಡುತ್ತದೆ.

ತಾನೂ ಬದುಕಬೇಕು ಇತರರೂ ಬದುಕಬೇಕು; ತನ್ನ ಬದುಕಿನಂತೆಯೇ ತನ್ನ ಸುತ್ತಮುತ್ತಲಿನವರ ಬದುಕು ಕೂಡ ಸ್ವಾಭಿಮಾನದಿಂದ ಕೂಡಿರಬೇಕು. ಆ ಸ್ವಾಭಿಮಾನ ಮರ್ಯಾದಾ ಬದುಕನ್ನು ಕಬಳಿಸುವ ಕೆಲಸವನ್ನು ಮಾಡುವುದು ಪ್ರಕೃತಿ ಧರ್ಮಕ್ಕೆ ವಿರುದ್ಧವಾದ ನಡೆಯೆಂಬುದನ್ನು ಅರ್ಥ ಮಾಡಿಕೊಳ್ಳಬೇಕು.

■ ಶಿಕಾಕು

# ಮಾತೇ ಮುತ್ತು

★ ಅವಸರದಿಂದ ಮದುವೆ ಆಗು; ನಿಧಾನವಾಗಿ ಪಶ್ಚಾತ್ತಾಪ ಪಡು.
–ಡಚ್ ಗಾದೆ

★ ಮದುವೆಯ ದಿನ ಯಾವ ವಧುವೂ ಕುರೂಪಿ ಅಲ್ಲ.
–ಹಿಬ್ರೂ ಗಾದೆ

★ ವಿವಾಹ ಜೀವನ ಹೊಗಳು; ಆದರೆ ಬ್ರಹ್ಮಚಾರಿಯಾಗಿರು!
–ಇಟಲಿ ಗಾದೆ

★ ಮದುವೆಗೆ ಮೊನಚಾದ ಹಲ್ಲಿವೆ; ಬಲವಾಗಿ ಕಚ್ಚುತ್ತವೆ.
–ಜಮೈಕ ಗಾದೆ

★ ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ, ಕಣ್ಣಿಗೂ ಕಣ್ಣಾಗಿ ಒಳಗಿಹುದು.
–ದ.ರಾ.ಬೇಂದ್ರೆ

★ ಮನಸ್ಸಿನಲ್ಲೊಂದು ತರದಲ್ಲಿ ಯೋಚಿಸುವುದು, ಮಾತಿನಲ್ಲಿ ಇನ್ನೊಂದು ತರದಲ್ಲಿ ನುಡಿಯುವುದು ಹಾಗೂ ಕ್ರಿಯೆಯಲ್ಲಿ ಇನ್ನೊಂದು ತರದಲ್ಲಿ ವರ್ತಿಸುವುದು ದುರಾತ್ಮರ ಲಕ್ಷಣ.
–ವೀರೇಂದ್ರ ಹೆಗ್ಗಡೆ

★ ಭಾರತದಲ್ಲಿ ರಾಜಕಾರಣವು ಮೂರ್ಖರಿಗೆ ಕೊನೆಯ ರಕ್ಷಣೆಯಾಗಬಾರದು.
–ಬಿ.ಆರ್.ಅಂಬೇಡ್ಕರ್

★ ಅಹಿಂಸೆಯನ್ನು ಅಳವಡಿಸಿಕೊಂಡಿರುವ ಮತ್ತು ಯಾವುದೇ ಧರ್ಮವನ್ನು ಪಾಲಿಸಲು ಜನತೆಗೆ ಸ್ವಾತಂತ್ರ್ಯ ನೀಡಿರುವ ಭಾರತ ವಿಶ್ವಕ್ಕೇ ಮಾದರಿ.
–ದಲಾಯಿ ಲಾಮ

★ ಬೇರೆಯವರನ್ನು ಕೆಳಕ್ಕಿಳಿಸುವ ಯಾವುದನ್ನೂ ಮಾಡಬಾರದು: ಅಂತೆಯೇ ನಮ್ಮನ್ನು ಕೆಳಕ್ಕಿಳಿಸಿಕೊಳ್ಳುವಂಥದನ್ನೂ ಸಹ ನಾವು ಮಾಡಬಾರದು.
–ಸ್ವಾಮಿ ರಂಗನಾಥಾನಂದ

★ ದುರ್ಜನರ ಸಂಗವು ಮುಳ್ಳಿನಂತೆ, ಅಂತಹವರ ಸಂಗ ಮಾಡಬಾರದು.
–ಸಿದ್ದೇಶ್ವರ ಸ್ವಾಮಿಗಳು

★ ವಿದ್ಯೆಯ ಮುಖ್ಯ ಗುರಿಯೆಂದರೆ ಇತರರೊಡನೆ ಕೂಡಿ ಬಾಳುವ ಕಲೆಯನ್ನು ಕಲಿಸುವುದು.
–ಡಾ.ಸರ್ವಪಲ್ಲಿ ರಾಧಾಕೃಷ್ಣನ್

★ ನೂರು ಮಂದಿ ಒಂದು ಕಡೆ ಇರಬಹುದು. ಆದರೆ ಮನೆ ಎಂದಾಗಲು ಒಬ್ಬ ಹೆಂಗಸು ಬೇಕು.
–ಚೀನಾ ಗಾದೆ

★ ಮನುಷ್ಯರನ್ನು ಹದ್ದು ಬಸ್ತಿನಲ್ಲಿಡುವುದಕ್ಕೆ, ತನ್ನ ಪರಮಾಧಿಕಾರವನ್ನು ತೋರಿಸುವುದಕ್ಕೆ ದೇವರು ಇಟ್ಟುಕೊಂಡಿರುವ ಅಸ್ತ್ರ– ಮರಣ.
–ಎಂ.ಆರ್.ಶ್ರೀನಿವಾಸಮೂರ್ತಿ

★ ಮಕ್ಕಳು ಕತ್ತಲೆಯಲ್ಲಿ ಹೋಗಲು ಹೆದರುವಂತೆ, ಜನ ಮರಣವನ್ನು ಕಂಡರೆ ಹೆದರುತ್ತಾರೆ.
–ಬೇಕನ್